ಬದುಕಿನಿಂದ ಪಲಾಯನ ಮಾಡಲು ಬೋಧಿಸಲಿಲ್ಲ. ಈ ಲೋಕದ ಕಾರ್ಪಣ್ಯಗಳನ್ನು ಸಮರ್ಥವಾಗಿ ಎದುರಿಸಿ ಹಸನಾಗಿ ಬದುಕಲು ದಾರಿತೋರಿದ್ದಾರೆ. ದಾಸಿಮಯ್ಯನಿಗೆ ಬಡತನ ಓದಿದ ಸುದ್ದಿಯಲ್ಲ, ಅನುಭವಿಸಿದ ಬವಣೆ. ಲೋಕದಲ್ಲಿ ಸಾಮಾನ್ಯನು ತನ್ನ ಮೂಲ ಅವಶ್ಯಕತೆಗಳಿಗೆ ದೈನಂದಿನ ಜೀವನದಲ್ಲಿ ಹೇಗೆ ಪರಿತಪಿಸುತ್ತಾನೆ ಎಂದು ತಿಳಿದಿದೆ. ಆದ್ದರಿಂದ ದಾಸಿಮಯ್ಯ ತನ್ನ ವಚನವೊಂದರಲ್ಲಿ ಹಸಿವಿನ ಅನುಭವವನ್ನು ವಿಷವೇರಿದ್ದಕ್ಕೆ ಹೋಲಿಸಿ ಅನ್ನವೊಂದೇ ಆ ವಿಷಕ್ಕೆ ಮದ್ದು ಎನ್ನುತ್ತಾನೆ. ಈ ಜಗತ್ತಿನ ಕಷ್ಟಗಳನ್ನು ಕಾಣಲು ನೀನು ನನ್ನ ಹಾಗೆ ಒಮ್ಮೆ ಮಾನವದೇಹ ಧರಿಸು ಎಂದು ಪರಮಾತ್ಮನಿಗೆ ಸವಾಲು ಒಡ್ಡುತ್ತಾನೆ.

ಸಮಾಜದಲ್ಲಿನ ಅಶಾಂತಿ ಅಸಮಾನತೆಗಳಿಗೆ ಕಾರಣವಾಗಿರುವ ಲಿಂಗಭೇದ, ಜಾತಿ, ಮತ ಭೇದಗಳನ್ನು ದಾಸಿಮಯ್ಯ ಖಂಡಿಸುತ್ತಾನೆ. ಜನರ ಜೀವನ ಸುಖ ಸಮಾಧಾನಗಳಿಂದ ಕೂಡಿರಬೇಕೆಂಬ ಹಂಬಲವಿರುವ ದಾಸಿಮಯ್ಯನ ನುಡಿಗಳು ಕೆಲವೊಮ್ಮೆ ಹರಿತವೆನಿಸಿದರೂ ಆತನ ಹಂಬಲ ಮೆಚ್ಚತಕ್ಕದ್ದು. ಕರ್ನಾಟಕದಲ್ಲಿ ನಡೆದ ಹನ್ನೆರಡನೇ ಶತಮಾನದ ಆಂದೋಲನದ ಕೇಂದ್ರವ್ಯಕ್ತಿ ಬಸವಣ್ಣ, ಇಡೀ ಶರಣಕುಲಕ್ಕೇ ಗುರುಸ್ಥಾನದಲ್ಲಿದ್ದ ಅಲ್ಲಮಪ್ರಭು, ಸಮಾಜವನ್ನು ದಿಟ್ಟವಾಗಿ ಎದುರಿಸಿ ನಿಂತ ಅಕ್ಕಮಹಾದೇವಿ—ಹೀಗೆ ಹಲವು ವಚನಕಾರರು ತಮ್ಮ ವಿಶಿಷ್ಟತೆಗಳಿಂದ 'ವಚನ ಚಳುವಳಿ'ಯನ್ನು ಅರ್ಥಪೂರ್ಣಗೊಳಿಸಿದರು. ವಚನಸಾಹಿತ್ಯ ಎಂಟುನೂರು ವರ್ಷಗಳಾದರೂ ತನ್ನ ಪ್ರಖರತೆಯನ್ನು ಕಳೆದುಕೊಳ್ಳದೆ ಉಜ್ವಲವಾಗಿರುವಲ್ಲಿ ಆದ್ಯವಚನಕಾರನಾದ ಜೇಡರ ದಾಸಿಮಯ್ಯನ ಕೊಡುಗೆ ಸಾಮಾನ್ಯವಲ್ಲ.

❑

# ಸತ್ಯಸಂಶೋಧಕರು

ಕೆ. ಲೀಲಾವತಿ

*ಸತ್ಯದ ವಿವಿಧ ಆಯಾಮಗಳ ವೈಚಾರಿಕ ಪರಿಚಯವನ್ನು ಮಾಡಿಕೊಡುವ ಈ ಲೇಖನ ಖ್ಯಾತ ಅನುಭಾವಿಗಳೂ ಹಾಗೂ ಆಧ್ಯಾತ್ಮ ಪಿಪಾಸುಗಳಿಗೆ ಮಾರ್ಗದರ್ಶಿಗಳೂ ಆಗಿರುವ ಬಿಜಾಪುರದ ಪೂಜ್ಯ ಶ್ರೀಸಿದ್ಧೇಶ್ವರ ಸ್ವಾಮಿಗಳ ವಿಚಾರ ಹಾಗೂ ಉಪನ್ಯಾಸಗಳಿಂದ ಪ್ರಭಾವಿತವಾಗಿದೆ. ಲೇಖಕಿ ಕೆ. ಲೀಲಾವತಿಯವರು ಮೈಸೂರಿನ ನಿವಾಸಿಗಳೂ ಹಾಗೂ ಆಶ್ರಮದ ಭಕ್ತರೂ ಆಗಿದ್ದಾರೆ.*

'ಸತ್ಯ' ಎಂಬ ಪದವು 'ಸತ್' ಅಂದರೆ ಇರುವಿಕೆ ಎಂಬ ಧಾತುವಿನಿಂದ ಬಂದಿದೆ. ವಸ್ತುತಃ ಸತ್ಯವನ್ನು ಬಿಟ್ಟು ಬೇರೇನೂ ಇಲ್ಲ, ಇರುವುದೂ ಇಲ್ಲ. ಆ ಸತ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ಒಬ್ಬೊಬ್ಬರದು ಒಂದೊಂದು ಬಗೆಯಾಗಿರುತ್ತದೆ. ಸತ್ಯವೆಂಬುದು ಸಾರ್ವಭೌಮ ತತ್ತ್ವ, ಅಸಂಖ್ಯಾತವಾದ ಅನೇಕ ತತ್ತ್ವಗಳು ಅದರಲ್ಲಿ ಅಡಗಿವೆ.

ನಮಗೆ ಏನೇನು ಕಾಣಿಸುತ್ತದೊ ಅದಷ್ಟೇ ಸತ್ಯ, ಏನೇನು ಕೇಳಿಸುತ್ತದೊ ಅದೇ ಸತ್ಯ ಎಂದು ಹೇಳಲಾಗುವುದಿಲ್ಲ. ಅದು ನಿಜವಾಗಿಯೂ ಸತ್ಯವೇ ಎನ್ನುವುದನ್ನು ಪರಾಮರ್ಶೆಗೆ ಒಳಪಡಿಸಬೇಕಾಗುತ್ತದೆ. ಸತ್ಯವನ್ನು ಕಾಣುವ ಮನೋವಿಕಾಸವಾದರೂ ಎಲ್ಲರಲ್ಲೂ ಒಂದೇ ಪರಿಯಾಗಿರುವುದಿಲ್ಲ, ಸತ್ಯ ಹಾಗೇ ತಿಳಿಯುವ ಹಾಗಿದ್ದರೆ ಎಲ್ಲರೂ ಸತ್ಯದರ್ಶಿಗಳಾಗಿರುತ್ತಿದ್ದರು. ಕೋಟಿ ಕೋಟಿ ಜನರಿದ್ದಾರೆ, ಆದರೆ ಒಂದೇ ಸತ್ಯ ಒಬ್ಬರಿಗೆ ಕಂಡಂತೆ ಮತ್ತೊಬ್ಬರಿಗೆ ಕಂಡಿಲ್ಲ. ಅಲ್ಲದೆ ಒಬ್ಬನ ಸತ್ಯ ಇನ್ನೊಬ್ಬನಿಗೆ ಅಸತ್ಯವೆನಿಸಬಹುದು. ವಿಶೇಷ ಶರಣತೆ ಹಾಗೂ ಸಮರ್ಪಣೆ ಇಲ್ಲದವರಾರಿಗೂ ಸತ್ಯ ಗೋಚರಿಸುವುದಿಲ್ಲ. ಸತ್ಯದರ್ಶಿಗಳು ತಾವೇನು ಕಂಡರೊ ಅದನ್ನು ಶಬ್ದಗಳ ಮಧ್ಯೆ ಹಿಡಿದಿಟ್ಟರು. ಅಂತಹ ಸತ್ಯದ ಶಬ್ದಗಳನ್ನು ಮಂತ್ರಗಳು, ವಚನಗಳು, ಸೂಳ್ನುಡಿ, ವೈಜ್ಞಾನಿಕ ಸೂತ್ರಗಳು ಎಂದೆಲ್ಲಾ ಕರೆದರು. ಇದು ಯಾರ ಶಬ್ದವೇ ಆಗಿರಲಿ, ಯಾವುದೇ ಶಬ್ದವಾಗಿರಲಿ, ಅದು ತನ್ನ ಅರ್ಥದೊಳಗೆ ಸತ್ಯದ ಮುಖವನ್ನು ತೋರಿಸುತ್ತದೆ. ವ್ಯಕ್ತಿಯ ನಿರ್ಮಾಣ ಆಗಬೇಕಿದ್ದರೆ, ಮನಸ್ಸಿನಲ್ಲಿ ಶಾಂತಿಯ ಸುಗಂಧ ಸೂಸಬೇಕಿದ್ದರೆ ಸತ್ಯದ ದರ್ಶನ ಆಗಬೇಕಾಗುತ್ತದೆ.

---

**ಸತ್ಯವು ಯಾವ ಸಮಾಜಕ್ಕೂ, ಅದು ಪುರಾತನವಾಗಲಿ ಆಧುನಿಕವಾಗಲಿ, ಗೌರವ ಸಲ್ಲಿಸುವುದಿಲ್ಲ. ಸಮಾಜವು ಸತ್ಯಕ್ಕೆ ಮನ್ನಣೆ ತೋರಬೇಕು, ಇಲ್ಲವೆ ಅಳಿಯಬೇಕು.**

*—ಸ್ವಾಮಿ ವಿವೇಕಾನಂದ*

---

ಸತ್ಯ ಅಪಾತ್ರರಿಗಾಗಲೀ, ದಡ್ಡರಿಗಾಗಲೀ ಸಹಜಸುಲಭವಾಗಿ ಕೈಗೆ ಎಟಕುವಂತಹುದಲ್ಲ. ಇಂತಹ ಸತ್ಯದರ್ಶನಕ್ಕಾಗಿ ಮನುಷ್ಯ ಬಂದಿಷ್ಟು ಪ್ರಯಾಸ ಪಡಬೇಕಾಗುತ್ತದೆ. ಇದು ಮಾನಸಿಕವಾಗಿ ಹಾಗೂ ದೈಹಿಕವಾಗಿ ದೃಢವಾಗಿರುವ ಬೌದ್ಧಿಕ ವ್ಯಕ್ತಿಗಳಿಗೆ ಮಾತ್ರ ಸಾಧ್ಯ. ಜಗತ್ತಿನೊಳಗೆ ಬಹಳಷ್ಟು ಜನ ಸತ್ಯಾನ್ವೇಷಕರು ಆಗಿಹೋಗಿದ್ದಾರೆ. ಈ ಸತ್ಯದರ್ಶಿಗಳನ್ನು ನಾಲ್ಕು ಬಗೆಯಾಗಿ ವಿಂಗಡಿಸಬಹುದು. ಅವರು, ೧) ವಿಜ್ಞಾನಿಗಳು, ೨) ತತ್ತ್ವಜ್ಞಾನಿಗಳು, ೩) ಕವಿಗಳು, ೪) ಅನುಭಾವಿಗಳು.

## ವಿಜ್ಞಾನಿಗಳು

ಕೆಲವರು ಕಣ್ಣನ್ನೇ ಸರಿಯಾಗಿ ಬಳಸಿಕೊಂಡು ಸತ್ಯ ಏನಿದೆ ಎಂದು ಕಂಡುಹಿಡಿಯಲು ಪ್ರಯತ್ನಿಸಿದರು. ಬಹಳ ಸೂಕ್ಷ್ಮವಾಗಿ

ನೋಡಿದರು. ಅವರು ಏನನ್ನು ಕಂಡರೋ ಅದನ್ನು ಶಬ್ದಗಳಲ್ಲಿ ಇಟ್ಟರು, ಸೂತ್ರಗಳಲ್ಲಿ ಇಟ್ಟರು. ಅಂತಹವರನ್ನು ನಾವು ವಿಜ್ಞಾನಿಗಳು ಎಂದು ಕರೆಯುತ್ತೇವೆ. ಅವರು ಜಗತ್ತಿನ ಮೇರೆಗಳಿಗೆ ತಮ್ಮ ಕಣ್ಣಿನ ದೃಷ್ಟಿಯನ್ನು ಸೂಕ್ಷ್ಮವಾಗಿ ಹರಿಸಿದರು. ಬಹಳ ದೂರದವರೆಗೆ ಟೆಲಿಸ್ಕೋಪಿನ ಮೂಲಕ, ಮೈಕ್ರೋಸ್ಕೋಪಿನ ಮೂಲಕ, ಅನೇಕ ಪ್ರಯೋಗಗಳ ಮೂಲಕ ತಮ್ಮ ದೃಷ್ಟಿ ಹರಿಸಿದರು. ಏನಿದೆ ಅಂತ ಸಾಧಾರಣ ಕಣ್ಣಿಗೆ ಕಾಣದ್ದನ್ನು ಅವರು ಕಂಡು ನಿಖರವಾಗಿ ಹೇಳಿದರು. ನಮಗೇನು ಕಾಣಿಸುತ್ತದೆ ಅದು ಹಾಗೇ ಇದೆಯೇ? ಎಂದು ಪ್ರಶ್ನಿಸಿಕೊಂಡು ಬಹಳ ಸೂಕ್ಷ್ಮವಾಗಿ ಜಗತ್ತನ್ನು ನೋಡಿದರು. ಅವರಿಗೆ ಏನೋ ಒಂದು ಬಗೆಯ ಜಗತ್ತು ಕಂಡಿತು. ಐನ್‌ಸ್ಟೈನ್‌ರಿಗೆ ಕಂಡಂತಹ ಜಗತ್ತು ನಮಗೆ ಕಂಡಿಲ್ಲ. ಗೆಲಿಲಿಯೋಗೆ ಕಂಡಂತಹ ಜಗತ್ತು ನಮಗೆ ಕಂಡಿಲ್ಲ. ನಮಗೆ ಕಾಣುವ ಜಗತ್ತೇ ಬೇರೆ, ವಿಜ್ಞಾನಿಗಳಿಗೆ ಕಾಣುವ ಜಗತ್ತೇ ಬೇರೆ. ಇದೇ ಜಗತ್ತು ವಿಜ್ಞಾನಿಗಳಿಗೇ ಒಂದು ರೀತಿ ಕಾಣಿಸುತ್ತದೆ, ನಮಗೇ ಒಂದು ರೀತಿ ಕಾಣಿಸುತ್ತದೆ. ಉದಾಹರಣೆಗೆ ಭೂಮಿ ಕಂಡಕೂಡಲೇ ಇದು ಇಂತಹವರ ಭೂಮಿ ಅಂತ ಅನ್ನಿಸುತ್ತದೆಯೇ ಹೊರತು ಬರೀ ಭೂಮಿ ಅನ್ನಿಸುವುದಿಲ್ಲ. ಇದು ನನ್ನ ಭೂಮಿಯೋ ಅವರ ಭೂಮಿಯೋ ಅನ್ನುವ ಭಾವ ನಮಗೆ ಬರುತ್ತದೆ. ಇಡೀ ಭೂಮಿಯಾಗಿ ನೋಡಲಿಕ್ಕೆ ನಮ್ಮಿಂದ ಆಗುವುದಿಲ್ಲ. ವಿಜ್ಞಾನಿಗಳು ಇದನ್ನು ಸ್ಪಷ್ಟ ತಿಳಿದುಕೊಳ್ಳಬೇಕು ಅಂತ ಹೊರಟರು. ನಮ್ಮ ದೃಷ್ಟಿಗೂ ಅವರ ದೃಷ್ಟಿಗೂ ಅಷ್ಟು ಭಿನ್ನತೆ ಇರುತ್ತದೆ.

ಒಂದು ಗಿಡದ ಹಣ್ಣು ಕೆಳಗೆ ಬಿದ್ದಾಗ, ಕೆಳಗೇ ಯಾಕೆ ಬಿದ್ದಿತು ಅಂತ ಹುಡುಕಾಟದಲ್ಲಿ ತೊಡಗಲು ಒಬ್ಬ ನ್ಯೂಟನ್ ಬೇಕಾಗಿದ್ದ. ಪ್ರಶ್ನೆ ಸಣ್ಣದು, ಆದರೆ ಸತ್ಯದ ಉತ್ತರ ಬಹಳ ಕಷ್ಟ. ನಮ್ಮಂತಹವರ ಮೇಲೆ ಎಷ್ಟು ಹಣ್ಣು ಬಿದ್ದರೂ ನಾವು ಕೇಳಲು ಹೋಗುವುದಿಲ್ಲ. ಏಕೆಂದರೆ ಕೆಳಗೆ ಬೀಳದೆ ಇನ್ನೆಲ್ಲಿ ಬೀಳುತ್ತದೆ ಅಂತ ನಾವು, ಕೆಳಗೇ ಯಾಕೆ ಬಿತ್ತು ಅಂತ ನ್ಯೂಟನ್. ಮೇಲೆ ಯಾಕೆ ಹೋಗಲಿಲ್ಲ? ಅಡ್ಡಡ್ಡ ಯಾಕೆ ಹೋಗಲಿಲ್ಲ? ಕೆಳಗೇ ಯಾಕೆ ಬಿತ್ತು ಎಂದು ಪ್ರಶ್ನೆ ಕೇಳಿದ. ನ್ಯೂಟನ್‌ನ ಪ್ರಶ್ನೆಗೆ ಉತ್ತರ ಇರಲಿಲ್ಲ. ಈ ಪ್ರಶ್ನೆಗೆ ಉತ್ತರ ಹುಡುಕಲಿಕ್ಕಾಗಿ ತನ್ನ ಅಮೂಲ್ಯ ಜೀವನವನ್ನೆಲ್ಲಾ ಮುಡಿಪಾಗಿಟ್ಟ. ಆ ಪ್ರಶ್ನೆಯ ಉತ್ತರಕ್ಕಾಗಿ ಹುಡುಕಾಡಿದ. ಮುಂದೊಂದು ದಿನ ಗುರುತ್ವಾಕರ್ಷಣೆಯ ಸತ್ಯ ತನ್ನ ಮೈ ಬಿಚ್ಚಿತ್ತು!

ಥಾಮಸ್ ಆಲ್ವ ಎಡಿಸನ್ ಶಾಲೆಯಲ್ಲಿ ದಡ್ಡ ವಿದ್ಯಾರ್ಥಿಯಾಗಿದ್ದ. ಗುರುಗಳು ಮನೆಗೆ ಕಳಿಸಿದ್ದರು. ಮನೆಗೆ ಬಂದ ಎಡಿಸನ್ನನಿಗೆ ತಾಯಿಯೇ ಗುರುವಾದಳು, ಕಣ್ಣೇ ಉಪಕರಣವಾಗಿತ್ತು, ಜಗತ್ತೇ ಪುಸ್ತಕವಾಗಿತ್ತು. ಮುಂದೊಂದು ದಿನ ಜಗತ್ತೇ ಅಚ್ಚರಿಪಡುವಷ್ಟು ದೊಡ್ಡ ವಿಜ್ಞಾನಿಯಾದ! ಇಂತಹ ವೈಜ್ಞಾನಿಕ ಸತ್ಯದರ್ಶನ ಆಗಬೇಕಿದ್ದರೆ ಇಂತಹವರಿಗೇ ಆಗುತ್ತದೆ ಅಂತಿಲ್ಲ. ಅದಕ್ಕೆ ದೃಷ್ಟಿ ಬೇಕಾಗುತ್ತದೆ.

**ತತ್ತ್ವಜ್ಞಾನಿಗಳು**

ಮನುಷ್ಯ ಯಾವುದು ಕಣ್ಣಿಗೆ ಕಾಣಿಸುತ್ತದೆಯೊ, ಯಾವುದು ಶಬ್ದಕ್ಕೆ ನಿಲುಕುತ್ತದೆಯೊ, ಯಾವುದು ಟೆಲಿಸ್ಕೋಪ್-ಮೈಕ್ರೋಸ್ಕೋಪ್‌ಗಳಿಗೆ ನಿಲುಕುತ್ತದೆಯೊ ಅದರಾಚೆಗೆ ಏನಿರಬೇಕು ಅಂತ ಹುಡುಕಾಟದಲ್ಲಿ ತೊಡಗಿದ. ತನ್ನ ಮನಸ್ಸನ್ನು ಒಂದಿಷ್ಟು ಕಾಣುವ ಮತ್ತು ಕೇಳುವ ಸತ್ಯಗಳಾಚೆಗೆ ಚಾಚಿದ. ಅಂತಹ ಕುತೂಹಲದಿಂದ ಏನನ್ನೋ ಹುಡುಕಾಡಲು ಪ್ರಾರಂಭಿಸಿದ. ಇಂತಹವನನ್ನು ತತ್ತ್ವಜ್ಞಾನಿ ಅಥವಾ philosopher ಎಂದು ಕರೆದರು. ತತ್ತ್ವಜ್ಞಾನಿ ಅತ್ಯದ್ಭುತ ಚಿಂತಕ. ಈ ಬಣ್ಣದ ಆಚೆಗೆ ಏನಿರಬೇಕು? ಕೇಳಿಸೋ ಶಬ್ದದ ಆಚೆಗೆ ಏನಿರಬೇಕು? ವಿಸ್ತಾರವಾದ ಆಕಾಶದಾಚೆಗೆ ಏನಿರಬೇಕು? ಅಂತೆಲ್ಲಾ ಪ್ರಶ್ನೆ ಕೇಳಿದ. ಜನ್ಮದಿಂದೀಚೆಗೆ, ಸಾವಿನಿಂದಾಚೆಗೆ ಏನಿರಬೇಕು ಅಂತ ನೋಡುವ ಪ್ರಯತ್ನ ಮಾಡಿದ. ನಾವು ಇವೆರಡರ ಮಧ್ಯೆ ಚಿಂತಿಸುತ್ತೇವೆ. ನಮ್ಮ ಚಿಂತನೆ ನಮ್ಮ ಮನೆ, ಹೆಂಡತಿ, ಮಕ್ಕಳಾಚೆಗೆ ಹೋಗುವುದಿಲ್ಲ, ನಮಗದು ಮಹತ್ವದ್ದೂ ಅಲ್ಲ. ಏಕೆಂದರೆ ನಮಗೆ ಇದೇ ಜೀವನ ಅನ್ನಿಸುತ್ತದೆ. ನಾವು ಕಣ್ಣಿನ ಸೆಳೆತಕ್ಕೆ ಸಿಕ್ಕಿಕೊಂಡಿದ್ದೇವೆ. ನಾಲಿಗೆ, ಸ್ಪರ್ಶ-ಸೌಖ್ಯಗಳ ಸೆಳೆತಗಳ ಮಧ್ಯೆ ಮೈಮರೆತು ಬಿಟ್ಟಿದ್ದೇವೆ. ಇವು ನಮಗೆ ಬಹಳ ದೊಡ್ಡ ಸಮಸ್ಯೆಗಳು. ಆದರೆ ತತ್ತ್ವಜ್ಞಾನಿ ಯಾವುದೋ ಸಮಸ್ಯೆ ಬಿಡಿಸಲು ಮೈಮರೆಯುತ್ತಾನೆ! ಎಷ್ಟು ಮೈಮರೆಯುತ್ತಾನೆಂದರೆ, ನಾವು ಯಾವುದಕ್ಕಾಗಿ ಬಹಳಷ್ಟು ಜೀವನವನ್ನು ಸಮರ್ಪಣೆ ಮಾಡಿಕೊಂಡಿದ್ದೇವೆಯೋ ಅಂತಹ ವಿಷಯಗಳನ್ನೇ ಆತ ಮರೆತುಬಿಡುತ್ತಾನೆ!

ಕಪಿಲನ ತಂದೆ ಈತ ಹುಟ್ಟಿದ ಕೂಡಲೆ ದೇಹವನ್ನು ತ್ಯಜಿಸಿದ. ಕಪಿಲ ಮತ್ತು ಆತನ ತಾಯಿ ಇದ್ದರು. ಕಪಿಲನ ಓಜಸ್ಸು-ತೇಜಸ್ಸುಗಳನ್ನು ನೋಡುತ್ತಿದ್ದ ಆತನ ತಾಯಿಯು ತನ್ನ ಗಂಡನನ್ನು ನೆನೆದು ಕಣ್ಣೀರಿಡುತ್ತಿದ್ದಳು. ತನ್ನ ಗಂಡ ಇದ್ದಿರುತ್ತಿದ್ದರೆ ಈ ಹುಡುಗನನ್ನು ಕಂಡು ಸಂತೋಷಪಡುತ್ತಿದ್ದ ಅನ್ನಿಸುತ್ತಿತ್ತು. ಒಂದು ಸಲ ಕಪಿಲ ತಾಯಿಯ ಕಣ್ಣೀರಿಗೆ ಕಾರಣ ಕೇಳಿದ. ಅದಕ್ಕೆ

ತಾಯಿ : "ನಿಮ್ಮ ತಂದೆ ನಿನ್ನ ನೋಡಬೇಕಿತ್ತು! ಆದರೆ ಆತ ಹೋಗಿಬಿಟ್ಟ."

ಕಪಿಲ : "ಎಲ್ಲಿಗೆ ಹೋದ?"

ತಾಯಿ : "ಎಲ್ಲರೂ ಎಲ್ಲಿಗೆ ಹೋಗುತ್ತಾರೊ, ಅಲ್ಲಿಗೆ ಹೋದ?"

ಕಪಿಲ : "ಎಲ್ಲರೂ ಎಲ್ಲಿಗೆ ಹೋಗುತ್ತಾರೆ?"

ತಾಯಿ : "ನನಗೆ ಗೊತ್ತಿಲ್ಲ. ನನಗೆ ಗೊತ್ತಿಲ್ಲದ ಜಾಗಕ್ಕೆ ನಿನ್ನ ತಂದೆ ಹೋಗಿಬಿಟ್ಟ."

ಕಪಿಲ : "ಗೊತ್ತಿಲ್ಲದ್ದನ್ನು ಗೊತ್ತುಮಾಡಿಕೊಳ್ಳಬೇಕೇ ಹೊರತು, ಅದಕ್ಕೆ ಅಳೋದು ಏಕೆ? ಗೊತ್ತಿಲ್ಲದ್ದನ್ನು ಗೊತ್ತುಮಾಡಿಕೊಳ್ಳೋದರಲ್ಲಿ ಸುಖ ಇದೆಯೇ ಹೊರತು, ಗೊತ್ತಿಲ್ಲ ಅಂತ ದುಃಖಿಸುವಲ್ಲಿ ಸುಖ ಎಲ್ಲಿರುತ್ತದೆ?

ತಾಯಿ : "ಬಹುಶಃ ಗೊತ್ತಾಗಲಿಕ್ಕಿಲ್ಲ, ಏಕೆಂದರೆ ಗೊತ್ತಿದ್ದವರೇ ಇಲ್ಲವೆಂದ ಬಳಿಕ ಗೊತ್ತಾಗುವುದಾದರೂ ಹೇಗೆ? ಅದನ್ನು ನೀನೇ ಹುಡುಕಾಡಬೇಕು."

ಆಗ ಕಪಿಲ ಸಣ್ಣ ಹುಡುಗ, ಹುಡುಕಲು ಪ್ರಾರಂಭ ಮಾಡಿದ. ಸಂಶೋಧನೆಗೆ ತೊಡಗಿದ, ಮುಂದೊಂದು ದಿನ ಅಪ್ಪಟ ತತ್ತ್ವಜ್ಞಾನವನ್ನೇ ಕೊಟ್ಟ. ಅವನ ಈ ಸಂಶೋಧನೆಯೇ ಸಾಂಖ್ಯತತ್ತ್ವಜ್ಞಾನವೆಂದು ಕರೆಯಲ್ಪಟ್ಟಿತು. ಜಗತ್ತು ಮಿತವಾಗಿದೆ, ಜಗತ್ತಿನಾಚೆಗೆ ಅಸೀಮ ಸತ್ಯ ತುಂಬಿರಬೇಕು ಅನ್ನುವುದನ್ನು ಕಪಿಲ ಗುರುತಿಸಿದ.

ಕವಿಗಳು

ವಿಜ್ಞಾನಿಗಳು ಸತ್ಯವನ್ನು ಬಿಡಿಸಿ ಬಿಡಿಸಿ ನೋಡುವ ಪ್ರಯತ್ನ ಮಾಡಿದ್ದರು. ಇನ್ನೊಬ್ಬ ಸತ್ಯ ದಾರ್ಶನಿಕ ಅದನ್ನು ನೋಡಿ ಇದ್ದಕ್ಕಿದ್ದಂತೆ ಅನುಭವಿಸುವ ಪ್ರಯತ್ನ ಮಾಡಿದ್ದ. ಹಾಗೇ ಅನುಭವಿಸಿದ. ತಾನು ಅನುಭವಿಸಿದ ಸತ್ಯವನ್ನು ಪದಗಳಲ್ಲಿ ವರ್ಣಿಸಿದ. ಅವನಿಗೆ ಭಾವನೆಗಳು ತೀಕ್ಷ್ಣವಾಗಿದ್ದವು. ಅವನು ಏನಿದೆ ಎಂದು ಹುಡುಕಾಡಲು ಹೋಗಲಿಲ್ಲ. ಕಂಡ ಸೌಂದರ್ಯವನ್ನು ಆಸ್ವಾದಿಸತೊಡಗಿದ. ಇಂತಹವನನ್ನು ಕವಿ ಎಂದು ಕರೆಯಲಾಯಿತು.

ಸೂರ್ಯೋದಯ ಆಯಿತು, ಸೂರ್ಯ ಏನು ಅಂತ ವಿಚಾರ ಮಾಡಲಿಕ್ಕೆ ಹೋಗಲಿಲ್ಲ, ಕವಿ ಸೂರ್ಯೋದಯದ ಸೌಂದರ್ಯವನ್ನು ಕಣ್ಣಿನ ತುಂಬ ನೋಡಿದ. ಮನಸ್ಸಿನಲ್ಲಿ ಅದನ್ನು ಆಸ್ವಾದಿಸಿದ. ಎಲ್ಲ ಮರೆತು ಸುಮಗ್ನನಾದ! ಅಷ್ಟು ಮೈಮರೆತು ಏನನ್ನು ವರ್ಣಿಸಿದನೋ ಅದೇ ಮಹಾಕಾವ್ಯವಾಗಿ ಹೊರ ಹೊಮ್ಮಿತು! ಇದು ಕವಿಯ ಸತ್ಯದರ್ಶನ.

ಒಂದು ಹೂವನ್ನು ನೋಡಿದಾಗ ಅದರ ಸೌಂದರ್ಯವನ್ನು ಹಾಗೆಯೇ ಆಸ್ವಾದಿಸುವುದರಲ್ಲಿ ಆನಂದ ಇರುತ್ತದೆ. ಈ ಹೂವಿನಲ್ಲಿ ಏನೇನು ಇದೆ ಎಂದು ದಳದಳಗಳ ಬಿಡಿಸಿ, ಅದರಲ್ಲಿರುವ ಕಣಕಣಗಳನ್ನೂ ಒಡೆಯುತ್ತಾ ಹೋದಲ್ಲಿ ಹೂವಿನ ಸೌಂದರ್ಯ ಎಲ್ಲಿ ಉಳಿದೀತು? ಇದನ್ನು ಮೈಕ್ರೋಸ್ಕೋಪ್ ಬಳಸಿ ನೋಡುವುದು ವೈಜ್ಞಾನಿಕ ಸತ್ಯ, ಇದ್ದಕ್ಕಿದ್ದಂತೆ ಹಾಗೆಯೇ ಅನುಭವಿಸುವುದು ಭಾವಸತ್ಯ. ವೈಜ್ಞಾನಿಕ ದೃಷ್ಟಿ ಎಲ್ಲರಿಗೂ ಸಾಧ್ಯವಿಲ್ಲ. ಕವಿಯ ದೃಷ್ಟಿಯನ್ನು ಬಳಸಿಕೊಂಡು ಕಣ್ಣನ್ನು ತೆರೆದಾಗ ಜಗತ್ತಿನಲ್ಲಿ ಏನು ಕಾಣಿಸುತ್ತದೆಯೋ ಅದು ಭಾವದರ್ಶನ! ಈ ಸುಂದರ ದರ್ಶನ ಯಾರಿಗಾದರೂ ಸಾಧ್ಯವಾಗುತ್ತದೆ.

ಅನುಭಾವಿಗಳು

ಕೆಲವೊಂದು ಬಾರಿ ಒಂದಿಷ್ಟು ಹೊರಗಿನ ಕಣ್ಣು ಮುಚ್ಚಿ ಒಳಗಿನ ಕಣ್ಣು ತೆರೆದು ನೋಡಬೇಕಾಗುತ್ತದೆ. ಬುದ್ಧಿಗೆ ನಿಲುಕದ್ದು, ಕಣ್ಣಿಗೆ ಕಾಣದ್ದು ಭಾವಕ್ಕೆ ಬರುತ್ತದೆ. ಸಾಮಾನ್ಯ ಪ್ರಾಣಿಗಳೂ ಕೂಡ ತಮ್ಮನ್ನೇ ಸಮರ್ಪಣೆ ಮಾಡಿಕೊಂಡು ತಮ್ಮ ಮಕ್ಕಳನ್ನು ರಕ್ಷಿಸುತ್ತವೆ, ತಮ್ಮ ಬಂಧು-ಬಾಂಧವರನ್ನು ಪ್ರೀತಿಸುತ್ತವೆ. ಎಂಥಾ ಅದ್ಭುತ ಪ್ರೇಮ ಅದು! ಈ ಪ್ರೇಮ ಕಲ್ಲಿನಲ್ಲಿ ಇಲ್ಲ, ಮಣ್ಣಿನಲ್ಲಿ ಇಲ್ಲ. ಈ ಸ್ಪಂದನಕ್ಕೆ ಕಾರಣವೇನು? ಸತ್ಯಾಸತ್ಯತೆಗಳ ಪ್ರಜ್ಞೆ, ಒಳಿತು-ಕೆಡುಕುಗಳ ಪ್ರಜ್ಞೆ, ಸರಿ-ತಪ್ಪುಗಳ ಪ್ರಜ್ಞೆ ಅಂತ ಏನು ನಮಗೆ ತಿಳಿಯುತ್ತದೋ, ನಾನು ಬೇರೆ, ವಸ್ತುಗಳು ಬೇರೆ ಅಂತ ಅನ್ನಿಸುತ್ತದೆಯಲ್ಲಾ ಇದಕ್ಕೆ ಕಾರಣ ಯಾವುದೋ ಅದನ್ನು ಆತ್ಮ ಎಂದು ಕರೆಯುತ್ತಾರೆ. ದೇಹ ಅಶಕ್ತವಾಗಲಿ, ಸಶಕ್ತವಾಗಲಿ 'ನಾನು' ಅನ್ನುವ ಭಾವ ಇದೆಯಲ್ಲಾ ಅದೇ ಆತ್ಮ. ಇದು ನಮ್ಮ ಭಾವನೆಗಳೊಂದಿಗೆ ಸ್ಪಂದಿಸುತ್ತದೆ, ಆದರೆ ಇದಕ್ಕೆ ರೂಪವಿಲ್ಲ, ಭಾವನೆಗಳಿಲ್ಲ, ಬದಲಾವಣೆಗಳೇ ಇಲ್ಲ. ಈ ಆತ್ಮವಸ್ತು ಪ್ರಾಣಿಗಳಲ್ಲಿ ಹೇಗಿದೆಯೋ ಹಾಗೇ ನಮ್ಮೊಳಗೂ ಇದೆ. ದೇಹಕ್ಕೆ ಬದಲಾವಣೆಗಳಿವೆ. ಆತ್ಮಕ್ಕೆ ಬದಲಾವಣೆಗಳಿಲ್ಲ, ಆತ್ಮ ಒಳಗಿರುವ ಸತ್ಯ.

ಈ ಸತ್ಯವನ್ನು ಅರಿಯಲು ಮನುಷ್ಯ ತನ್ನನ್ನೇ ಶೂನ್ಯಗೊಳಿಸಿಕೊಂಡ. ನಾವು ಹೇಗೆ ಈ ಪ್ರಪಂಚವನ್ನು ಅನುಭವಿಸುತ್ತೇವೆಯೊ ಅದರಾಚೆಗಿನ ತತ್ತ್ವವನ್ನೂ ಅನಂತತೆಯ ಸತ್ಯವನ್ನೂ ಅನುಭವಿಸಿದ. ತನ್ನನ್ನು ಮರೆತು ಆ ಕ್ಷಣಕ್ಕೆ ಏನಾಯಿತೋ ಅದನ್ನು ಅನುಭವಿಸಿ ಅನುಭಾವಿಯಾದ. ಯಾವುದು ಸೂಕ್ಷ್ಮವಾಗಿದೆಯೋ, ವಿಸ್ತಾರವಾಗಿದೆಯೋ ಅದನ್ನು ಅನುಭವಿಸುವುದು. ಭಾವ ಸಾಮಾನ್ಯ ಇತ್ತು ಅಂದರೆ ಅನುಭವ, ಇದೇ ಮನಸ್ಸು ದಿವ್ಯವಾಗಿದ್ದರೆ ಅನುಭಾವ ಆಗುತ್ತದೆ.

ಈ ನಾಲ್ವರೂ ಸತ್ಯ ಸಂಶೋಧಕರು, ಸತ್ಯದರ್ಶಿಗಳು, ಸತ್ಯಸಾಧಕರು. ಯಾರ ಮನಸ್ಸಿನಲ್ಲಿ ಸತ್ಯವನ್ನು ತಿಳಿಯಬೇಕು ಅನ್ನಿಸುತ್ತದೆಯೋ, ಅವರಿಗೆ ಜಗತ್ತು ತೈತೆರೆಯುತ್ತದೆ. ಇದೇ ಸತ್ಯ ಅಂತ ತಿಳಿಯಬೇಕಿದ್ದರೆ ಒಬ್ಬ ವಿಜ್ಞಾನಿಯೋ, ತತ್ತ್ವಜ್ಞಾನಿಯೋ, ಕವಿಯೋ, ಸಂತನೋ ಬರಬೇಕಾಗುತ್ತದೆ. ಸತ್ಯಕ್ಕೆ ಯಾವ ಜಾತಿ ಧರ್ಮಗಳಿಲ್ಲ. ಸತ್ಯ ಸತ್ಯವೇ. ಸತ್ಯ ಇಂತಹವರಿಗೇ ಅಂತಲ್ಲ, ಸತ್ಯ ತಿಳಿಯಬೇಕಿದ್ದರೆ ತಲೆ ಸ್ವಚ್ಛ ಇರಬೇಕಾಗುತ್ತದೆ. ಸತ್ಯ ತಿಳಿದ ಬಳಿಕ ನಿರ್ಭಾವ ಸ್ಥಿತಿ ಬರುತ್ತದೆ. ಸತ್ಯದ ಮಹಾಪ್ರಜ್ಞೆಯಿಂದ ಸಂತೋಷ ಉಂಟಾಗುತ್ತದೆ.

ಸತ್ಯವನ್ನು ಅರಿತುಕೊಳ್ಳುವ ಅವಶ್ಯಕತೆಯಿದೆ. ಏಕೆಂದರೆ ಬದುಕನ್ನು ಅಸತ್ಯದ ಮೇಲೆ ಕಟ್ಟಲು ಸಾಧ್ಯವಿಲ್ಲ. ಅಸತ್ಯದ ಮೇಲೆ ಸುಂದರ ದೇಶ ಕಟ್ಟಲಾಗುವುದಿಲ್ಲ. ಸುಳ್ಳಿನ ಮೇಲೆ ಕೃತ್ರಿಮ ಜೀವನವನ್ನು ನಿರ್ಮಿಸಿಕೊಳ್ಳಬಹುದೇ ಹೊರತು ಒಬ್ಬ ಮಹಾ ಸಂತನನ್ನೋ, ಮಹಾ ವಿಜ್ಞಾನಿಯನ್ನೋ, ಒಬ್ಬ ಮಹಾ ದಾರ್ಶನಿಕನನ್ನೋ, ಒಬ್ಬ ಮಹಾ ಕವಿಯನ್ನೋ ನಿರ್ಮಿಸಲು ಆಗುವುದಿಲ್ಲ. ಬದುಕಿನ ಸೌಂದರ್ಯ, ಬದುಕಿನ ವೈಭವ ಸುಳ್ಳಿನಿಂದ ಬರುವುದಲ್ಲ. ಅನೇಕ ಸತ್ಯದರ್ಶಿಗಳು ತಮ್ಮ ಪರಿಶ್ರಮದಿಂದ ಸತ್ಯವನ್ನು ನಮ್ಮ ಮುಂದೆ ಬಿಡಿಸಿಟ್ಟಿದ್ದಾರೆ, ನಮ್ಮ ಬದುಕನ್ನು ಸುಗಮಗೊಳಿಸಿದ್ದಾರೆ. ಅನೇಕ ಮಹಾನುಭಾವರ ಸತ್ಯಶೋಧನೆಗಳಿಂದ ನಾವಿಂದು ಸುಖೀಜೀವನವನ್ನು ನಡೆಸುತ್ತಿದ್ದೇವೆ. ಅದಕ್ಕಾಗಿ ನಾವಿಂದು ಎಲ್ಲ ಸತ್ಯಶೋಧಕರಿಗೆ ಚಿರಋಣಿಗಳಾಗಿದ್ದೇವೆ.

*ಕೃಪೆ* : 1) ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಜ್ಞಾನಯೋಗಾಶ್ರಮ, ಬಿಜಾಪುರ—ಇವರ ಪ್ರವಚನಗಳು
2) ಗಾಂಧೀಜಿಯವರ ಪುಸ್ತಕಗಳು